**<u>ಸಾಕ್ಷಿಯನ್ನು ದಿನಾಂಕ 13.10.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಬಿ ಆರ್ ಎಸ್ ವಕೀಲರಿಂದಃ</u>**

ಅಗ್ರಿಮೆಂಟ್ ನ್ನು ಸಬ್ ರಿಜಿಸ್ಟ್ರರ್ ಕಚೇರಿಯ ಹೊರಗೆ ಚಂದ್ರಶೇಖರರವರು ಟೈಪ್ ಮಾಡಿದ್ದಾರೆ. ಅವರು ವಕೀಲರು ಮತ್ತು ಸ್ಟ್ಯಾಂಪ್ ಮಾಡಿದ್ದಾರೆ. 4 ರಿಂದ 4.30 ರ ಸಮಯದಲ್ಲಿ ಟೈಪ್ ಮಾಡಿದ್ದಾರೆ. ಟೈಪ್ ಮಾಡುವ ಸಮಯದಲ್ಲಿ ನಾನು, ಶಿವಾರೆಡ್ಡಿ, ದೇವರೆಡ್ಡಿ, ಪ್ರೇಮಾ ಮತ್ತು ಚಂದ್ರಶೇಖರ ಇದ್ದರು. ಯಾರ ಕಂಪ್ಯೂಟರ್ ರಲ್ಲಿ ಟೈಪ್ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಮತ್ತು ಅವರ ಹೆಸರು ಗೊತ್ತಿಲ್ಲ. ಟೈಪ್ ಮಾಡುವುದನ್ನು ನಾನು ನೋಡಿಲ್ಲ. ಚಂದ್ರಶೇಖರ ರವರ ಟೈಪಿಂಗ್ ಆಫೀಸ್ ಇದೆ. ಅಲ್ಲಿಗೆ ನಾನು ಹೋಗಿಲ್ಲ. ಸರೀತಾ ರವರು ವ್ಯವಹಾರಕ್ಕೆ ಸಹಿ ಮಾಡಲು ಬನ್ನಿ ಎಂದು ಕರೆದಿದ್ದರು. ಮೂರು ದಿನ ಮುಂಚಿತವಾಗಿ ನನಗೆ ತಿಳಿಸಿದ್ದರು.

ನನಗೆ ಏನು ವಿಚಾರ ಗೊತ್ತಿಲ್ಲದಿದ್ದರೂ ಸಹಿ ಹಾಕಿದ್ದೇನೆ ಎಂದು ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಗ್ರಿಮೆಂಟ್ ನಮ್ಮ ಸಮಕ್ಷಮ ನಡೆದಿಲ್ಲ ಎಂದರೆ ಸರಿಯಲ್ಲ. ದೇವರೆಡ್ಡಿಯವರ ಊರು ತಿಮ್ಮಸಂದ್ರ. ದೇವರೆಡ್ಡಿಯವರಾಗಲೀ ಅಥವಾ ಅವರ ಹೆಂಡತಿಯಾಗಲೀ ಜಮೀನು ಮಾರಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಸರೀತಾ ರವರ ಮಾತು ಕೇಳಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.